ಮಾಡಿದರೂ, ಮಾತನಾಡಬೇಕೆಂದುಕೊಂಡವರಿಗೆ ಫೋನ್ ತಾಗುತ್ತಲೇ ಇಲ್ಲ, ಆಕಡೆ ಬೇರ್‍ಯಾರೋ ಏನೇನೋ ಮಾತನಾಡುತ್ತಾರೆ. ಈಕೆ ಉದ್ವೇಗದಿಂದ ಮತ್ತೆ ಫೋನ್ ಕಟ್ ಮಾಡಿ ಮತ್ತೆ ಡಯಲ್ ಮಾಡುತ್ತಾಳೆ, ಅದು ಮತ್ತಾರಿಗೋ ಹೋಗುತ್ತಿದೆ. ಮನ ಹಿಂಡಿದಂತೆ ಸಂಕಟವಾಗುತ್ತಿದೆ. ಈ ನಡುವೆ ಎಲ್ಲೋ ಒಂದುಕಡೆ ಐದಾರು ಫೋನುಗಳನ್ನು ಟೇಬಲ್ಲಿನ ಮೇಲೆ ಹರಡಿಕೊಂಡು; ಎರಡೂ ಕಿವಿಗೂ ಒಂದೊಂದು ರಿಸೀವರು, ಕೈಯ್ಯಲ್ಲಿ ಇನ್ನೊಂದು ಹಿಡಿದುಕೊಂಡು ಅತ್ತಿಂದಿತ್ತ ಬದಲಾಯಿಸುತ್ತಾ ಯಾವುದೋ ವ್ಯಕ್ತಿ ಕುಳಿತಿದ್ದಾನೆ... ಆತ ಚಂದ್ರಕಾಂತನೇ ಎಂಬ ಊಹೆಗೆ ಬೆಚ್ಚಿ ಎಚ್ಚರಗೊಂಡಳು. ಏಸಿ ಕೋಣೆಯಲ್ಲೂ ಬೆವರಿದಂತಾಯ್ತು ಆಕೆಗೆ.

ಮರುದಿನ, ಸಣ್ಣ ಕಾರಣಕ್ಕಾಗಿ ಹೆಂಡತಿಯ ಮೇಲೆ ರೇಗಿದ್ದಕ್ಕೆ ತುಂಬಾ ನೊಂದುಕೊಂಡ ಚಂದ್ರಕಾಂತ. ಆಕೆಯ ಸ್ಥಿತಿ ನೋಡಿ 'ಅಯ್ಯೋ ಪಾಪ' ಅನ್ನಿಸಿತು. ಸ್ವಲ್ಪ ಚೇಂಜ್ ಇರಲಿ ಎಂದು ಅವಳನ್ನು ತನ್ನ ಬಂದರು ಕಾಮಗಾರಿ ನಡೆಯುವ ಸ್ಥಳಕ್ಕೆ ಕರೆದುಕೊಂಡು ಹೋಗಿ ಎಲ್ಲವನ್ನೂ ತೋರಿಸಿ ಬರುವ ವಿಚಾರ ಮಾಡಿದ. ಎರಡ್ಮೂರು ದಿನದಲ್ಲಿ ಮೇಲಧಿಕಾರಿಯಿಂದ ಅನುಮತಿಯನ್ನೂ ಪಡೆದುಕೊಂಡ. ಚೇತನಾಳೂ ಖುಷಿಯಿಂದಲೇ ಹೊರಟಳು. ಸೀವಾಲ್ ಎಂದರೇನು, ಜೆಟ್ಟಿ ಎಂದರೇನು, ಸಮುದ್ರದೊಳಗೆ ಕಾಂಕ್ರೀಟು ಹೇಗೆ ಪಂಪ್ ಮಾಡುತ್ತಾರೆ ಎಂಬುದನ್ನೆಲ್ಲಾ ವಿವರಿಸುತ್ತ, ಇರಾನ್ ಕಾಣುತ್ತದೆ ಎನ್ನುವ ಸ್ಥಳಕ್ಕೆ ಕರೆದೊಯ್ದ. ಈ ಕುರಿತು ಹಿಂದೆಯೇ ಹಲವುಬಾರಿ ಚಂದ್ರಕಾಂತ ಪ್ರಸ್ತಾವ ಮಾಡಿದ್ದರಿಂದ ಆಕೆಗೂ ಅದರ ಬಗ್ಗೆ ಸಹಜ ಕುತೂಹಲವಿತ್ತು.

ಸಮುದ್ರದತ್ತ ಬೆರಳುಮಾಡಿ ತೋರಿಸುತ್ತಾ, "ಅಗೋ ನೋಡು. ಅದೇ ಬಂದರ್–ಎ–ಅಬ್ಬಾಸ್, ಕಾಣ್ತಾ ಇದ್ಯಾ?... ದಟ್ಟ ಕಂದು ಬಣ್ಣದ ಆಕಾರವಿದೆಯಲ್ಲ ಅದೇ ಅಲ್ಲಿಯ ಕಟ್ಟಡಗಳು" ಅಂದ. ಎಷ್ಟೇ ಗಮನಿಸಿ ನೋಡಿದರೂ ಆಕೆಗೆ ಅನಂತ ಶರಧಿಯ ವಿನಃ ಮತ್ತೇನೂ ಗೋಚರಿಸಲಿಲ್ಲ.

"ಸರಿಯಾಗಿ ನೋಡೇ..." ಎನ್ನುತ್ತ ಚಂದ್ರಕಾಂತ ಆಕೆಯ ಕಣ್ಣಳತೆಯನ್ನು ಹೆಚ್ಚಿಸುವ ಪ್ರಯತ್ನದಲ್ಲಿರುವ ನಡುವೆಯೇ–

"ವಾವ್!..." ಎಂದು ಚೀರುತ್ತಾ ಚಪ್ಪಾಳೆ ಹೊಡೆದು ಕುಪ್ಪಳಿಸಿದಳು ಚೇತನಾ. "ನೋಡಿದ್ರಾ? ಜೋಡಿ ಡಾಲ್ಫಿನ್ನುಗಳು ಹೇಗೆ ನೀರಿಂದ ಹೊರ ಚಿಮ್ಮಿ ಮತ್ತೆ ಡುಬುಕಿ ಹೊಡೆದವು!" ಎನ್ನುತ್ತಾ ಒಮ್ಮೆಲೇ ಎಕ್ಸೈಟ್ ಆದಳು.

ಅವಕ್ಕಾದ ಚಂದ್ರಕಾಂತ, ತನಗೇನೂ ಕಂಡಿಲ್ಲವೆಂದ.

"ಇಲ್ಲೇ ಕಣ್ಣೆದುರಿಗೇ, ಹತ್ತಿರದಲ್ಲೇ ನೆಗೆದವಲ್ಲ!... ಎಷ್ಟು ಕ್ಯೂಟಾಗಿತ್ತು..." ಎನ್ನುತ್ತಾ, ಮತ್ತೆ ಕಂಡೀತೋ ಎಂದು ಇನ್ನಷ್ಟು ಹೊತ್ತು ಕಾದಳು ಆಕೆ. "ಇಲ್ಲಿ ತುಂಬಾ ಡಾಲ್ಫಿನ್ನುಗಳಿವೆಯೋ... ನೀವ್ಯಾವಾಗಲೂ ನೋಡುತ್ತಿರುತ್ತೀರೋ?..." ಇತ್ಯಾದಿಯಾಗಿ ವಿಚಾರಿಸಿದಳು.

ಮಧ್ಯಾಹ್ನದ ಊಟ ಕೂಡ ಕಚೇರಿಯ ಕ್ಯಾಂಟೀನಿನಲ್ಲೇ ಆಯಿತು. ಒಟ್ಟಾರೆ ಭೇಟಿಯಲ್ಲಿ ಆಕೆಗೆ ಈ ಡಾಲ್ಫಿನ್ನುಗಳ ದರ್ಶನ ವಿಶೇಷವೆನಿಸಿತು ಹಾಗೂ ಖುಷಿ ಕೊಟ್ಟಿತು.

ಚಂದ್ರಕಾಂತನಿಗೂ ಇದು ವಿಚಿತ್ರವೆನಿಸಿತು. ಆತ ಹಿಂದೆಂದೂ ಅಲ್ಲಿಯ ಸಮುದ್ರದಲ್ಲಿ ಡಾಲ್ಫಿನ್ನುಗಳನ್ನು ಕಂಡಿರಲಿಲ್ಲ. ನಂತರ ಇದರ ಕುರಿತು ಸಹೋದ್ಯೋಗಿಗಳಲ್ಲಿ ವಿಚಾರಿಸಿದ. ಹೆಚ್ಚಿನವರು ತಾವೆಂದೂ ನೋಡಿಲ್ಲವೆಂದರೆ, ಕೆಲವರು 'ಹೌದು ಇರಬಹುದು' ಎಂದರು. ಆದರೆ